ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರದನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

ಸಿ.ಸಿ.ನಂ.944/2020.

ದಿನಾಂಕಃ29-09-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂಃ4 ಸಿ.ಡಬ್ಲ್ಯೂಃ4

ಸಾಕ್ಷಿಯ ಹೆಸರು ಃ ಮಹದೇವಯ್ಯ
ತಂದೆಯ ಹೆಸರು ಃ ಮಹೇಶ್ವರಯ್ಯ
ವಯಸ್ಸು ಃ 58 ವರ್ಷ
ಉದ್ಯೋಗ ಃ ವ್ಯವಸಾಯ
ವಾಸ ಃ ಕುಡ್ಲೂರು ಗ್ರಾಮ

**ಮುಖ್ಯ ವಿಚಾರಣೆಃ** ಮಾನ್ಯ ಸ ಸ ಅ ಅವರಿಂದಃ-

ಚಾಸಾ 1 ಮತ್ತು 2 ನನಗೆ ಗೊತ್ತು. 1 ಮತ್ತು 2 ನೇ ಆರೋಪಿತರು ನನಗೆ ಗೊತ್ತು.

ನಾನು ಯಾವುದೇ ಗಲಾಟೆಯನ್ನು ನೋಡಿಲ್ಲ ಮತ್ತು ಸದರಿ ಗಲಾಟೆಯ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)*

**ಪಾಟೀ ಸವಾಲುಃ** ಮಾನ್ಯ ಸ ಸ ಅ ರವರಿಂದ ಃ-

ದಿನಾಂಕ 15.06.2020 ರಂದು ಸಂಜೆ 5 ಗಂಟೆಯ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದಾಗ ಹೊರಗಡೆ ರಸ್ತೆಯಲ್ಲಿ ಕೂಗಾಡುವ ಶಬ್ಧ ಕೇಳಿ ಹೋಗಿ ನೋಡಲಾಗಿ 1 ಮತ್ತು 2ನೇ ಆರೋಪಿತರು ಚಾಸಾ 1ರವರಿಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ 4 ರವರು ಸದರಿ ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹೋಗುವಾಗ ಚಾಸಾ 1 ರವರಿಗೆ ಕೊಲೆ ಬೆದರಿಕೆ ಹಾಕಿ ದೊಣ್ಣೆಯನ್ನು ಅಲ್ಲಿಯೇ ಎಸೆದುಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ 1 ರವರನ್ನು ನಾನು ವಿಚಾರಿಸಿದ್ದು ಆರೋಪಿತರು ತನಗೆ ಅವಾಚ್ಯವಾಗಿ ಬೈದು ದೊಣ್ಣೆಯಿಂದ ತನ್ನ ತಲೆಯ ಎಡಭಾಗಕ್ಕೆ ಹೊಡೆದು ರಕ್ತ ಗಾಯಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಘಟನೆಯ ಕುರಿತು ನಾನು ನನ್ನ ಹೇಳಿಕೆಯನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಹೇಳಿಕೆಯನ್ನು ಈಗ ಓದಿ ಹೇಳಿದ್ದು, ಸಾಕ್ಷಿಯು ತನ್ನ ಹೇಳಿಕೆಯನ್ನು ತಿರಸ್ಕರಿಸಿದ ಮೇರೆಗೆ ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ</u> ಆರೋಪಿ ಪರ ವಕೀಲರಿಂದಃ- ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆ ಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ,

sd/xxx
(ಸಂತೋಷ್ ಕುಮಾರ್ ಪಿ.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ತರೀಕೆರೆ.